ಋ) ಇಲ್ಲ.

ಎ) ಹೊಸದಾಗಿ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ಪ್ರಕರಣೆ ಹೊರಡಿಸುವ ಮೊದಲು ಶೇ. 50 ರಷ್ಟು ಭೂಪರಿಹಾರ ಮೊತ್ತವನ್ನು ಠೇವಣಿ ಮಾಡಿ ತದನಂತರ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಭೂಸ್ವಾಧೀನ ಕಾಯ್ದೆ ಕಲಂ 6(1) ಅಧಿಸೂಚನೆ ಪ್ರಕಟಣೆಗೆ ಮೊದಲು ಇನ್ನುಳಿದ ಶೇ.50 ರಷ್ಟು ಮೊತ್ತವನ್ನು ಠೇವಣಿಗೊಳಿಸಿ, ಅವಾರ್ಡ್ ಅನುಮೋದನೆ ಪಡೆದು, ಅವಾರ್ಡುದಾರರಿಗೆ 12(2) ನೋಟೀಸ್ ಜಾರಿಗೊಳಿಸಿ ಆದಷ್ಟು ಬೇಗ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಏ) ಭೂಸ್ವಾಧೀನ ಕಾಯ್ದೆ ಪ್ರಕಾರ 4(1)ರ ಅಧಿಸೂಚನೆ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅವಾರ್ಡ್ ತಯಾರಿಕೆವರೆಗೆ ಬಡ್ಡಿ ಸೇರಿಸಿ ಪಾವತಿಸುವ ನಿಯಮವಿದ್ದು ಅದರಂತೆ ಅವಾರ್ಡ್ ಅನುಮೋದನೆಯಾದ ಎಲ್ಲಾ ಭೂಸ್ವಾಧೀನ ಪ್ರಕರಣಗಳಲ್ಲಿ ಬಡ್ಡಿ ಸಮೇತ ಪರಿಹಾರ ಪಾವತಿಸಲಾಗಿದೆ.

ಹೇಮಾವತಿ ಯೋಜನೆಗೆ ಹಣ

141(168) - ಶ್ರೀ ಲಕ್ಷ್ಮೀನಾರಾಯಣ.ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷದಿಂದ ಭಾರಿ ನೀರಾವರಿ ಇಲಾಖೆಗೆ ಎಷ್ಟು ಹಣ ನೀಡಲಾಗಿದೆ;

ಆ) ಹೇಮಾವತಿ ಯೋಜನೆಗೆ ಕಳೆದ 3 ವರ್ಷಗಳಿಂದ ಎಷ್ಟು ಹಣ ನೀಡಲಾಗಿದೆ; (ವಿವರ ನೀಡುವುದು)

ಇ) ಈ ಯೋಜನೆ ಯಾವಾಗ ಪ್ರಾರಂಭವಾಯಿತು; ಯಾವ ಅವಧಿಗೆ ಮುಗಿಯಬೇಕು;

ಈ) ಕಡಿಮೆ ಪ್ರಮಾಣದ ಹಣ ಕೊಟ್ಟರೆ ಯೋಜನೆ ಮುಗಿಸಲು ಸಾಧ್ಯವೇ;

ಉ) ಈ ಯೋಜನೆಗೆ ಸರ್ಕಾರ ತಿರಸ್ಕಾರ ಮನೋಭಾವ ಮಾಡಲು ಕಾರಣವೇನು;

ಊ) ಈ ಮೊದಲು ಎಷ್ಟು ಹಣ ನೀಡಲಾಗಿತ್ತು; ಕಾಮಗಾರಿ ಮುಗಿದು 2 ವರ್ಷಗಳಾದರೂ ಬಿಲ್‌ಗಳನ್ನು ಪಾವತಿ ಮಾಡದಿರಲು ಕಾರಣವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕಳೆದ 3 ವರ್ಷಗಳಿಂದ ಭಾರಿ ನೀರಾವರಿಗೆ ಈ ಕೆಳಕಂಡಂತೆ ಹಣ ಪಾವತಿಸಿದೆ.

(Rs. in lakhs)

	H.A/c.4701	Cauvery	Krishna, Godavari	Others
1.	1999-2000	19911.35	14037.95	
2.	2000-2001	17463.12	13349.80	
3.	2001-2002	14781.28	10680.02	

ಅ) ಹೇಮಾವತಿ ಯೋಜನೆಗೆ ಕಳೆದ 3 ವರ್ಷಗಳಿಂದ ಈ ಕೆಳಕಂಡಂತೆ ಹಣ ಪಾವತಿಸಿದೆ ಲೆಕ್ಕ ಶೀರ್ಷಿಕೆ

(Rs. in lakhs)

	H.A/c.4701	Gorur Zone	Tumkur Zone	Total
1.	1999-2000	2110.858	4050.40	6161.258
2.	2000-2001	2034.588	4393.60	6428.188
3.	2001-2002	2700.974	4321.60	7022.574

ಇ) ಹೇಮಾವತಿ ಯೋಜನೆಯು 1967-68 ರಲ್ಲಿ ಪ್ರಾರಂಭವಾಯಿತು. 2004-05ನೇ ಸಾಲಿಗೆ ಮುಗಿಸಲು ಯೋಜಿಸಲಾಗಿದೆ.

ಈ) ಕಡಿಮೆ ಪ್ರಮಾಣದ ಹಣ ಬಿಡುಗಡೆ ಮಾಡಿದ್ದಲ್ಲಿ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಳಂಬವಾಗುವುದು.

ಉ) ಪ್ರತಿ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುತ್ತಿರುವುದರಿಂದ ಈ ಯೋಜನೆ ಬಗ್ಗೆ ಯೋವುದೇ ತಿರಸ್ಕಾರ ಮನೋಭಾವ ಇರುವುದಿಲ್ಲ.

ಊ) ಲೆಕ್ಕ ಶೀರ್ಷಿಕೆ 4701 ರಡಿ ಮಾರ್ಚ್ 2002ರ ಅಂತ್ಯಕ್ಕೆ ರೂ. 75656.90 ಲಕ್ಷ ವೆಚ್ಚವಾಗಿರುತ್ತದೆ. ಕಾಮಗಾರಿಗಳ ಗುಣಮಟ್ಟವನಾನಧರಿಸಿ ಅನುದಾನಕ್ಕನುಗುಣವಾಗಿ ನೀರಾವರಿ ಸಾಮರ್ಥ್ಯ ಕಲ್ಪಿಸುವ ಕಾಮಗಾರಿಗಳಿಗೆ ಆದ್ಯತೆ ನೀಡಿ ಹಣ ಲಭ್ಯತೆಯನುಸಾರ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲಾಗುತ್ತಿದೆ.

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳ ಪಟ್ಟಿ ಸರಿಯಾದ ಕ್ರಮದಲ್ಲಿ ಆಗದಿರುವುದು

142(169) ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡವರನ್ನು ಗುರ್ತಿಸಿ ಸರಿಯಾದ ಕ್ರಮದಲ್ಲಿ ಬಿ.ಪಿ.ಸಿ. ಪಟ್ಟಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪಟ್ಟಿ ಮಾಡಲು ಯಾರನ್ನು ನಿಯೋಜಿಸಲಾಗಿತ್ತು?

ಇ) ಇವತ್ತು ಸರಿಯಾದ ಕ್ರಮದಲ್ಲಿ ಮಾಡದಿರಲು ಕಾರಣವೇನು?

ಈ) ಬಡವರನ್ನು ಗುರ್ತಿಸದೆ ಅನೇಕ ಮಧ್ಯಮ ವರ್ಗಕ್ಕೆ ಕಾರ್ಡುಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರಿಯಾದ ಕ್ರಮದಲ್ಲಿ ಪುನಃ ಮಾಡಿಸಲಾಗುವುದೇ?

ಊ) ಬಡವರಿಗೆ ಅನ್ಯಾಯ ಮಾಡದೆ ಬಿ.ಪಿ.ಸಿ. ಪಟ್ಟಿ ಮಾಡಿಸಿ ನ್ಯಾಯ ಕೊಡಿಸಲಾಗುವುದೇ?